ಆ) ಅವಶ್ಯವಿರುವ ಮೇಲ್ಕಂಡ ಸೇತುವೆ ನಿರ್ಮಿಸಲು ಸರ್ಕಾರವು ಕೂಡಲೇ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು)

ಆ) ಹೌದು

ಆ) ಈ ಸೇತುವೆ ನಿರ್ಮಾಣಕ್ಕೆ 10 ಲಕ್ಷ ರೂ.ಗಳ ಅಂದಾಜು ಮೊತ್ತವನ್ನು 1991-92ನೇ ಕ್ರಿಯಾ ಯೋಜನೆಯಲ್ಲಿ ಸೇರಿಸಿ, ಜಿಲ್ಲಾ ಪರಿಷತ್ ಅನುಮೋದನೆ ಕೋರಿದ್ದು ಅನುಮತಿ ದೊರೆತ ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದು.

ಪ್ರವಾಸೋದ್ಯಮದ ಅಭಿವೃದ್ಧಿ ಕುರಿತು

2067 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಕೈಗೊಂಡಿರುವ ಕ್ರಮಗಳೇನು?

ಆ) ಪ್ರವಾಸೋದ್ಯಮ ಅಭಿವೃದ್ಧಿ ವಿಶ್ವ ಬ್ಯಾಂಕಿನ ನೆರವನ್ನು ಪಡೆಯಲಾಗಿರುವುದೇ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು)

ಅ) ಕರ್ನಾಟಕದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ:

1) ಪ್ರವಾಸಿಗರಿಗೆ ವಸತಿ ಸೌಲಭ್ಯ
2) ರಸ್ತೆಬದಿ ಸೌಲಭ್ಯ
3) ಉಪಹಾರ ಮಂದಿರ ಮತ್ತು ಶೌಚಾಲಯಗಳ ಸೌಲಭ್ಯ
4) ವಿವಿಧ ಮಾಧ್ಯಮಗಳ ಮೂಲಕ ಪ್ರವಾಸೋದ್ಯಮ ಸಂಪತ್ತಿನ ಪ್ರಚಾರ
5) ದೋಣಿ ವಿಹಾರ ಸೌಲಭ್ಯ ಹಾಗೂ ಜಲಕ್ರೀಡೆ
6) ವ್ಯವಸ್ಥಿತ ಪ್ರವಾಸಗಳು
7) ವಿಮಾನ ನಿಲ್ದಾಣ ಅಭಿವೃದ್ಧಿ
8) ಕರ್ನಾಟಕದ ಪ್ರಮುಖ ಉತ್ಸವಗಳ ಆಚರಣೆ

ಆ) ಇಲ್ಲ.

ಕೊಳವೆ ಬಾವಿಗಳ ರಿಪೇರಿ ಕುರಿತು

2068-ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳವೆ ಬಾವಿ ರಿಪೇರಿ ಮತ್ತು ಹೆಚ್ಚಿನ ಆಳ ಕೊರೆಯಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಆ) ಮಂಡಲ ಪಂಚಾಯಿತಿಗಳಲ್ಲಿ ಹಣದ ಕೊರತೆ ಇರುವುದರಿಂದ ಕೊಳವೆ ಬಾವಿಗಳನ್ನು ರಿಪೇರಿ ಮಾಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

1) ಕೊಳವೆ ಬಾವಿ ರಿಪೇರಿಯನ್ನು ಮಂಡಲಪಂಚಾಯತ್ ಮತ್ತು ಜಿಲ್ಲಾ ಪರಿಷತ್‌ನವರು

2) ಹೆಚ್ಚಿನ ಆಳ ಕೊರೆಯುವ ಕೆಲಸವನ್ನು ಅಭಾವಪೀಡಿತ ಹಣದಲ್ಲಿ ಜಿಲ್ಲಾಧಿಕಾರಿಗಳು ನಿರ್ವಹಿಸುತ್ತಾರೆ. ಕೊಳವೆ ಬಾವಿಯನ್ನು ಪುನ: ಹೆಚ್ಚಿನ ಆಳಕ್ಕೆ ಕೊರೆಯಲಾಗದಿದ್ದರೆ, ಹೊಸ ಬಾವಿಯನ್ನು ಜಿಲ್ಲಾ ಪರಿಷತ್‌ಗಳು ಕೊರೆಯುತ್ತಾರೆ.

3) ಕೊಳವೆ ಬಾವಿಗಳಲ್ಲಿ ಅಳವಡಿಸಿರುವ ಕೈ ಪಂಪುಗಳನ್ನು ಸಕ್ಷಲುದಲ್ಲಿ ರಿಪೇರಿ ಮಾಡಲು ಅನುಕೂಲವಾಗುವಂತೆ ಸಾಕಷ್ಟು ಸಂಚಾರಿ ವಾಹನವನ್ನು ಜಿಲ್ಲಾ ಪರಿಷತ್‌ಗಳಿಗೆ ನೀಡಲಾಗಿದೆ. ಅದರಲ್ಲಿ ಈಗ ಪ್ರತಿ 500 ಕೊಳವೆ ಬಾವಿಗಳಿಗೆ ಒಂದರಂತೆ ಸಂಚಾರಿ ವಾಹನಗಳ ಲಭ್ಯವಿರುತ್ತದೆ.

4) ದೈನಂದಿನ ಕೈಪಂಪು ಉಸ್ತುವಾರಿಗಾಗಿ ಕೈಪಂಪು ಮೇಲ್ವಿಚಾರಕ ಸಿಬ್ಬಂದಿಯವರಿಗೆ ತರಬೇತಿ ಸಹ ನೀಡಲಾಗುತ್ತಿದೆ.

5) ಯಾವುದಾದರೂ ಕೊಳವೆ ಬಾವಿಗಳ ನೀರಿನ ಮಟ್ಟ ಹಾಗೂ ಇಳುವರಿ ಕಡಿಮೆ ಆದಲ್ಲಿ ಅವುಗಳನ್ನು ಸರಿಪಡಿಸಲು ಭೂ ಭೌತಿಕ ತನಿಖೆ ಮಾಡಿಸಿ ಅವುಗಳನ್ನು ಆಳವಡಿಸುವುದಾಗಲೀ ಅಥವಾ ಹೊಸ ಕೊಳವೆ ಬಾವಿಗಳನ್ನು ತೋಡಲು ಸೂಕ್ತಕ್ರಮವನ್ನು ಸಂಬಂಧಪಟ್ಟ ಜಿಲ್ಲಾ ಪರಿಷತ್‌ನವರೇ ಕೈಗೊಳ್ಳುತ್ತಾರೆ.

ಅ) *ಕೊಳವೆ ಬಾವಿಗಳನ್ನು ಸಮರ್ಪಕವಾಗಿ ನಿರ್ವಹಿಸಲು ಬೇಕಾಗುವ ತಲಾ 275 ರೂಪಾಯಿಗಳ ವಾರ್ಷಿಕ ನಿರ್ವಹಣಾ ವೆಚ್ಚವನ್ನು ಸಂಬಂಧಪಟ್ಟ ಜಿಲ್ಲಾ ಪರಿಷತ್‌ಗಳಿಗೆ ಅನುದಾನ ನೀಡಲಾಗುತ್ತಿದೆ.*

ದಕ್ಷಿಣ ಕನ್ನಡ ಜಿಲ್ಲಾ ಪ್ರವಾಸ ತಾಣಗಳಿಗೆ ರಾಜ್ಯ ಪ್ರವಾಸೋದ್ಯಮ ಬಸ್ಸುಗಳನ್ನು ಓಡಿಸುವುದು

2048 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ಪ್ರದೇಶಗಳನ್ನು ಸರ್ಕಾರ ಪ್ರವಾಸಿ ಸ್ಥಳಗಳೆಂದು ಗುರುತಿಸಿರುವುದು?*

ಆ) *ಇದರಲ್ಲಿ ಉಳ್ಳಾಲ-ಸೋಮೇಶ್ವರ ಕಡಲು ತೀರವೂ ಸೇರಿರುವುದೆ?*

ಇ) *ಈ ಪ್ರವಾಸಿ ತಾಣಗಳಿಗೆ ಕರ್ನಾಟಕ ಪ್ರವಾಸೋದ್ಯಮ ಬಸ್ಸುಗಳ ಸಂಚಾರವನ್ನು ಏರ್ಪಡಿಸಲಾಗಿದೆಯೇ?*

ಈ) *ಇಲ್ಲದಿದ್ದಲ್ಲಿ, ಸರ್ಕಾರ ಈ ಸ್ಥಳಗಳಿಗೆ ಪ್ರವಾಸೋದ್ಯಮ ನಿಗಮದ ಬಸ್ಸುಗಳ ಸಂಚಾರವನ್ನು ಏರ್ಪಡಿಸಲು ಕ್ರಮ ಕೈಗೊಳ್ಳುವುದೆ?*

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು)

ಅ) *ಪ್ರವಾಸೋದ್ಯಮ ಇಲಾಖೆಯು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಕೆಳಕಂಡ ಸ್ಥಳಗಳನ್ನು ಪ್ರವಾಸಿ ತಾಣಗಳೆಂದು ಗುರುತಿಸಲಾಗಿದೆ:*

1. *ಮಂಗಳೂರು* 2. *ಕಾರ್ಕಳ* 3. *ಮೂಡಬಿದರೆ* 4. *ಉಡುಪಿ*
5. ಮರವಂತೆ 6. ಧರ್ಮಸ್ಥಳ 7. ಸೂರತ್‌ಕಲ್ 8. ಕೊಲ್ಲೂರು
9. ಕುಂದಾಪುರ 10. ಪಣಂಬೂರು 11. ಉಳ್ಳಾಲ 12. ಸೋಮೇಶ್ವರ
13. ಬಸರಾಳು 14. ಕಾಪು 15. ವೇಣೂರು 16. ಬೇಂದ್ರೆ ತೀರ್ಥ
17. ಸೇಂಟ್ ಮೇರೀಸ್ ಐಲ್ಯಾಂಡ್ 18. ಸುಬ್ರಮಣ್ಯ 19. ಮಲ್ಪೆ

ಆ) ಹೌದು.

ಇ) ಪ್ರವಾಸೋದ್ಯಮ ನಿಗಮದ ಬಸ್ಸುಗಳ ಸಂಚಾರವನ್ನು ಉಳ್ಳಾಲಕ್ಕೆ ಒದಗಿಸಲಾಗಿದೆ.

ಈ) ಸೋಮೇಶ್ವರಕ್ಕೆ ಬಸ್ ಸಂಚಾರ ಒದಗಿಸುವ ಕಾರ್ಯಕ್ರಮವಿಲ್ಲ.